ಪಿಡಬ್ಲ್ಯೂಃ 02

ಇಂದು ದಿನಾಂಕಃ.17.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದವರೆದ ಪಾಟೀ ಸವಾಲುಃ** ವಾದಿಯ ಪರ ಶ್ರೀ ಜಿ ಎಸ್ ಎಂ. ವಕೀಲರಿಂದಃ

ಪ್ರತಿವಾದಿ ನಂ.1 ರಿಂದ 4 ರವರ ತಂದೆಯ ಹೆಸರು ನಿಂಗಪ್ಪ. ಸದರಿ ಪ್ರತಿವಾದಿಯವರ ಅಜ್ಜನ ಹೆಸರು ಕೆಂಚಪ್ಪ. ಸದರಿ ಕೆಂಚಪ್ಪರವರಿಗೆ ಇಬ್ಬರು ಮಕ್ಕಳು. ನಿಂಗಪ್ಪ ಮತ್ತು ರಂಗಪ್ಪ. ಸದರಿ ಕೆಂಚಪ್ಪರವರ ತಂದೆಯ ಹೆಸರು ಗಿರಿಯಪ್ಪ. ಗಿರಿಯಪ್ಪನವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ರಂಗಪ್ಪ ತಂದೆ ತಿಮ್ಮಪ್ಪ ದೊಡ್ಡಮನಿಯವರಿಗೆ, ನಿಂಗಪ್ಪ, ಕೆಂಚಪ್ಪ ಮತ್ತು ಗಿರಿಯಪ್ಪ ಎಂದು 3 ಜನ ಮಕ್ಕಳು ಎಂದರೆ ಸರಿಯಲ್ಲ . ರಂಗಪ್ಪನಿಗೆ ನಿಂಗಪ್ಪ ಎಂದು ಮಗನಿದ್ದಾನೆ ಎಂದರೆ ಸುಳ್ಳು. ನಿಂಗಪ್ಪನಿಗೆ ಕೆಂಚಪ್ಪ ಎಂಬ ಒಬ್ಬನೇ ಮಗ ಎಂದರೆ ಸುಳ್ಳು. ನಿಂಗಪ್ಪನ ಮಗ ಕೆಂಚಪ್ಪನಿಗೆ ಇಬ್ಬರು ಮಕ್ಕಳು ಎಂದರೆ ಸರಿಯಲ್ಲ ಮುಂದುವರೆದು ಕೆಂಚಪ್ಪನಿಗೆ ಇಬ್ಬರು ಮಕ್ಕಳು. ತಿಮ್ಮಪ್ಪನ ಮಗ ರಂಗಪ್ಪನ ಎರಡನೇ ಮಗನ ಹೆಸರು ಕೆಂಚಪ್ಪ ಎಂದರೆ ಸುಳ್ಳು. ರಂಗಪ್ಪನ ಮಗ ಕೆಂಚಪ್ಪನಿಗೆ ಭರಮಪ್ಪ ಎಂಬ ಒಬ್ಬನೇ ಮಗ ಎಂದರೆ ಸುಳ್ಳು. ನಿಂಗಪ್ಪನ ಮಗ ಕೆಂಚಪ್ಪನಿಗೆ ನಿಂಗಪ್ಪ ಮತ್ತು ರಂಗಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸುಳ್ಳು. ನಿಂಗಪ್ಪನಿಗೆ ಇಬ್ಬರು ಮಕ್ಕಳು ನಾಗರಾಜಪ್ಪ ಮತ್ತು ಬಸವರಾಜಪ್ಪ. ಸದರಿಯವರ ಅಜ್ಜನ ಹೆಸರು ಕೆಂಚಪ್ಪ. ಕೆಂಚಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಭರಮಪ್ಪ ತಂದೆ ಕೆಂಚಪ್ಪ ದೊಡ್ಡಮನಿ ಇವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಭರಮಪ್ಪ ತಂದೆ ಕೆಂಚಪ್ಪ ದೊಡ್ಡಮನಿ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಭರಮಪ್ಪ ತಾಯಿ ನಿಂಗವ್ವ ಎಂದರೆ ಅವರು ಬೇರೆ ಘರಾಣೆ. ಸದರಿಯವರ ಮನೆಯ ಹೆಸರು ದೊಡ್ಡಮನಿ. ಭರಮಪ್ಪರವರ ತಾಯಿ ನಿಂಗವ್ವನ ಗಂಡನ ಹೆಸರು ನನಗೆ ಗೊತ್ತಿಲ್ಲ.

ದಾವಾ ಆಸ್ತಿಯ ಸರ್ವೆ ನಂಃ 120/8. ಸದರಿ ದಾವಾ ಆಸ್ತಿಯು ನಿಂಗಪ್ಪ ಕೆಂಚಪ್ಪ ದೊಡ್ಡಮನಿ ಅವರ ಮಕ್ಕಳ ಹೆಸರಿನಲ್ಲಿ ಮಾತ್ರ ಖಾತೆ ಇದೆ . ದಾವಾ ಆಸ್ತಿಯು ದೊಡ್ಡಮನಿ ಗಿರಿಯಪ್ಪ ತಂದೆ ನಿಂಗಪ್ಪ, ದೊಡ್ಡಮನಿ ಭರಮಪ್ಪ ತಂದೆ ಗಿರಿಯಪ್ಪ, ದೊಡ್ಡಮನಿ ರಂಗಪ್ಪ ಗಿರಿಯಪ್ಪ ತಾಯಿ ನಿಂಗವ್ವ, ದೊಡ್ಡ ಮನಿ ನಿಂಗಪ್ಪ ತಂದೆ ಕೆಂಚಪ್ಪ ಇವರ ಸಾಮೂಹಿಕ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. ಸದರಿ 5 ಜನರು ಪೋತಿಯಾಗಿದ್ದಾರೆ ಎಂದರೆ ಸರಿ. ಸದರಿಯವರ ವಂಶಾವಳಿಯ ಬಗ್ಗೆ ನನಗೆ ಮಾಹಿತಿ ಇದೆ . ದೊಡ್ಡಮನಿ ಗಿರಿಯಪ್ಪ ತಂದೆ ರಂಗಪ್ಪ ಇವರಿಗೆ ಇಬ್ಬರು ಮಕ್ಕಳು ಅವರ ಹೆಸರು ನನಗೆ ಗೊತ್ತಿಲ್ಲ. ಸದರಿಯವರ ವಂಶಾವಳಿಯ ಬಗ್ಗೆ ನನಗೆ ಗೊತ್ತಿಲ್ಲ. ದೊಡ್ಡಮನಿ ಭರಮಪ್ಪ ತಂದೆ ಗಿರಿಯಪ್ಪ ಇವರ ವಂಶಾವಳಿಯ ಬಗ್ಗೆ ನನಗೆ ಗೊತ್ತಿಲ್ಲ.

ದೊಡ್ಡಮನಿ ರಂಗಪ್ಪ  ಗಿರಿಯಪ್ಪ ತಾಯಿ ನಿಂಗವ್ವ ಇವರ ವಂಶಾವಳಿಯ ಬಗ್ಗೆ ನನಗೆ ಗೊತ್ತಿಲ್ಲ. ದೊಡ್ಡಮನಿ ನಿಂಗಪ್ಪ  ತಂದೆ ಕೆಂಚಪ್ಪ ಇವರ ವಂಶಾವಳಿಯ ಬಗ್ಗೆ ನನಗೆ ಗೊತ್ತಿದೆ.  ಸದರಿ 5 ಜನರು ಪೋತಿಯಾದ ನಂತರ ಅವರ ವಾರಸುದಾರರು ಹೆಸರಿಗೆ ಖಾತೆ ಬದಲಾವಣೆ ಆಗಿಲ್ಲ ಎಂದರೆ ಸರಿ. ಮುಂದುವರೆದು ವಾದಿಯರ ತಂದೆಯ ಹೆಸರನ್ನು ಕಡಿಮೆ ಮಾಡಿ ತಮ್ಮ ಹೆಸರನ್ನು ವಾರಸಾ ಮಾಡಿಕೊಂಡಿರುತ್ತಾರೆ.

ನಿಂಗಪ್ಪ ತಂದೆ ಕೆಂಚಪ್ಪ ದೊಡ್ಡಮನಿ ಇವರು ಒ.ಎಸ್ ನಂಃ 121/2004 ದಾವೆಯನ್ನು ಸದರಿ ಪ್ರತಿವಾದಿಯವರ ವಿರುದ್ಧ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯ ಮೇಲೆ ಮೇಲ್ಮನವಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.  ದಾವಾ ಆಸ್ತಿಯ ಚಕ್ಕಬಂದಿ ನನಗೆ ಹೇಳಲು ಬರುತ್ತದೆ. ಪೂರ್ವಕ್ಕೆ ಹಾಲಯ್ಯ ಮುದಿಗೌಡ್ರು,  ಪಶ್ಚಿಮಕ್ಕೆ ವಾದಿಯರ ಆಸ್ತಿ ಇದ್ದು ಅದರ ಹಿಸ್ಸೆ ನಂಬರ ನನಗೆ ಗೊತ್ತಿಲ್ಲ. ಉತ್ತರಕ್ಕೆ ಈರಪ್ಪ ಭರಮಪ್ಪ ದೊಡ್ಡಮನಿ,  ದಕ್ಷಿಣಕ್ಕೆ ರಾಮಪ್ಪ ಮುದಿಗೌಡ್ರು. ದಾವಾ ಆಸ್ತಿಗೆ ಹೊಂದಿಕೊಡಂತೆ ನನ್ನ ಆಸ್ತಿ ಇದ್ದು ಅದು ಈಶಾನ್ಯ ದಿಕ್ಕಿಗೆ ಇದೆ . ನಿಂಗಪ್ಪ ಶಿಕಾರಿಪುರ ತಾಲೂಕು ಕಡೇನಂದಿಹಳ್ಳಿಯಲ್ಲೇ  ಇದ್ದು ಅಲ್ಲಿಯೇ ಪೋತಿಯಾದ ಎಂದರೆ ಸರಿಯಲ್ಲ ಮುಂದುವರೆದು ಅಲ್ಲಿ  ಪೋತಿಯಾಗಿದ್ದು  ನಿಜ.  1 ಮತ್ತು 2 ನೇ ವಾದಿಯವರು ಸಹ ಶಿಕಾರಿಪುರ ತಾಲೂಕು ಕಡೇನಂದಿಹಳ್ಳಿಯಲ್ಲೇ ಇದ್ದಾರೆ ಎಂದರೆ ಸರಿಯಲ್ಲ. ಮಂದುವರೆದು ಹೋಗಿ ಬಂದು ಮಾಡುತ್ತಾರೆ. ನಿಂಗಪ್ಪರವರು ಕಳಗೊಂಡ ಗ್ರಾಮದಲ್ಲಿರುವ ಆಸ್ತಿಯನ್ನು ಮಾರಿರುತ್ತಾರೆ ಎಂದರೆ ಸರಿಯಲ್ಲ.  ದಾವಾ ಆಸ್ತಿಯ ಮೇಲೆ ಹೇಳಿದ 5 ಜನರ ಸಾಮೂಹಿಕ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ವಾದಿಯರ ತಂದೆಗೆ 1/5 ಹಿಸ್ಸೆ ಇದೆ ಎಂದರೆ ಸರಿಯಲ್ಲ ಮುಂದುವರೆದು ಸಂಪೂರ್ಣ ಆಸ್ತಿ ನಿಂಗಪ್ಪರವರದ್ದು.

ನಿಪಿ-01 ರಲ್ಲಿರುವ ನಿಂಗಪ್ಪ ತಂದೆ ಕೆಂಚಪ್ಪ ಅವರನ್ನು ಹೊರತುಪಡಿಸಿ ಉಳಿದವರ ವಾರಸುದಾರರೇ 1 ರಿಂದ 5 ನೇ ಪ್ರತಿವಾದಿಯರು ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪ್ರತಿವಾದಿಯವರ ಕಬ್ಜಾ ವಹಿವಾಟಿನಲ್ಲಿ ಇದೆ ಎಂದರೆ ಸುಳ್ಳು. ವಾದಿಯರ ತಂದೆ ನಿಂಗಪ್ಪ ತಂದೆ ಕೆಂಚಪ್ಪ  ದಾವಾ ಆಸ್ತಿಯನ್ನು ನಾನು ಒಬ್ಬನೇ ಮಗ ಎಂದು ಖಾತೆ ಮಾಡಿಕೊಂಡಿದ್ದನು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು  ಕಂದಾಯ ದಾಖಲೆಗಳು ಇಲ್ಲಿಯವರಗೊ ಸಾಮೂಹಿಕ ಮಾಲ್ಕೀದಾರರ ಹೆಸರಿನಲ್ಲಿ ನಮೂದು ಇವೆ ಎಂದರೆ ಸರಿ. ಸಾಮೂಹಿಕ ಮಾಲ್ಕೀದಾರರು ಪೋತಿಯ ನಂತರ ಅವರ ವಾರಸುದಾರರು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ . ಮುಂದುವರೆದು ನಿಂಗಪ್ಪರವರೇ ವಹಿವಾಟು ಮಾಡುತ್ತಿದ್ದಾರೆ. ಸದರಿ ನಿಂಗಪ್ಪರವರು ಶಿಕಾರಿಪುರದಲ್ಲಿರುವುದರಿಂದ ಪ್ರತಿವಾದಿಯರು ವಹಿವಾಟು ಮಾಡಿರುತ್ತಾರೆ ಎಂದರೆ ಸಯಲ್ಲ.

ದಾವಾ ಆಸ್ತಿಯು ಪ್ರತಿವಾದಿಯರ ಕಬ್ಜಾ ವಹಿವಾಟಿನಲ್ಲಿ ಇದ್ದರೂ ಸಹ ನಿಂಗಪ್ಪನ ವಹಿವಾಟಿನಲ್ಲಿದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯವರ ಘರಾಣೆಯ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಖರೀದಿ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.